# ಸರ್ಕಾರದ ಕೆಲಸ ದೇವರ ಕೆಲಸ

ಸ್ವಾತಂತ್ರ್ಯ ಪೂರ್ವದ ನಮ್ಮ ಹಿರಿಯರಿಗೆ ಒಂದು ದೊಡ್ಡ ಕನಸಿತ್ತು: ನಮಗೆ ಸ್ವಾತಂತ್ರ್ಯ ಬಂದ ಮೇಲೆ ನಮ್ಮನ್ನು ನಾವು ಆಳಿಕೊಳ್ಳುತ್ತೇವೆ; ನಮಗೆಲ್ಲರಿಗೂ ಅಕ್ಷರಜ್ಞಾನ ಸಿಗುತ್ತದೆ, ಅದರಿಂದ ನಮ್ಮ ಅರಿವು ವಿಸ್ತಾರಗೊಳ್ಳುತ್ತದೆ. ನಾವೇ ಸರ್ಕಾರಿ ನೌಕರರೂ, ಅಧ್ಯಾಪಕರೂ, ಕಾರ್ಮಿಕರೂ, ರಾಜಕಾರಣಿಗಳೂ ಆಗುತ್ತೇವೆ, ನಮ್ಮ ಅರಿವಿನ ಕಾರಣದಿಂದಾಗಿ ನಾವು ಯಾರನ್ನೂ ಶೋಷಣೆ ಮಾಡುವುದಿಲ್ಲ; ಭ್ರಷ್ಟಾಚಾರವೆಸಗುವುದಿಲ್ಲ; ಜಾತೀಯತೆಯನ್ನು ಆಚರಿಸುವುದಿಲ್ಲ; ನಾವೆಲ್ಲರೂ ಸಮಾನರು– ಸಮಾನತೆ ನಮ್ಮ ಮಂತ್ರ, ಆಶಯ. 'ಕಟ್ಟುವೆವು ನಾವು ಹೊಸ ನಾಡೊಂದನು' ಎಂಬ ಆದರ್ಶದಲ್ಲಿ ಆ ಹಿರಿಯರು ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ದಕ್ಕಿಸಿಕೊಟ್ಟರು. ಆದರೆ ಆರು ದಶಕಗಳ ನಮ್ಮ ಸ್ವಾತಂತ್ರ್ಯ ಜೀವನದಲ್ಲಿ ನಮ್ಮ ಹಿರಿಯರು ಕಂಡ ಆದರ್ಶದ ಕನಸು ಪಡೆದಿರುವ ರೂಪವನ್ನು ಕಂಡರೆ ಎಂಥವರಿಗೂ ಆತಂಕವಾಗುತ್ತದೆ. ಕನಸು ಕಾಣುವುದು ಕೂಡ ಭ್ರಮೆಯೇನೋ ಎಂಬ ಭಯ ಮೂಡುತ್ತದೆ.

ಇಂದು ನಮ್ಮನ್ನು ನಾವೇ ಶೋಷಣೆ ಮಾಡುತ್ತಿದ್ದೇವೆ. ನಾವು ಕೆಲಸ ಬಯಸುತ್ತೇವೆ; ಗೌರವಯುತವಾದ ವೇತನ ಬಯಸುತ್ತೇವೆ. ಆದರೆ ಅದಕ್ಕೆ ನಿಷ್ಠರಾಗಿ ದುಡಿಯಲು ನಾವು ಸಿದ್ಧರಿಲ್ಲ. ನಾವು ಮಾಡುವ ಕೆಲಸ ಸಮುದಾಯಕ್ಕೆ ಹಿತವಾಗುವಂತಿರಬೇಕು; ನಮ್ಮ ಆತ್ಮ ಮೆಚ್ಚುವಂತಿರಬೇಕು ಎಂಬ ಕಾಯಕ ನಿಷ್ಠೆ ನಮಗೆ ಮರೆತುಹೋಗಿದೆ. ಬಸವಧರ್ಮ ಇಂದು ಹುಸಿಯಾಗುವ ಹಂತಕ್ಕೆ ತಲುಪಿದೆ. ಯಾವುದೇ ಕೆಲಸವನ್ನು ಮಾಡಬೇಕಾದ ಹಂತದಲ್ಲಿ 'ಅಯ್ಯೋ ಮಾಡಬೇಕಲ್ಲ, ಅಯ್ಯೋ ಯಾರು ಮಾಡುತ್ತಾರೆ' ಎಂಬ ಉದಾಸೀನ ಭಾವ ಮನೆಮಾಡಿಕೊಳ್ಳುತ್ತಿದೆ. ಅಷ್ಟೋ ಇಷ್ಟೋ ಮಾಡುವ ಕೆಲಸದಲ್ಲಿ ಕಾಟಾಚಾರ ಎದ್ದು ಕಾಣುತ್ತಿದೆ. ಅದನ್ನೇ ಬಸವಣ್ಣ ತನ್ನ ವಚನವೊಂದರಲ್ಲಿ ಈ ರೀತಿ ವಿಡಂಬಿಸುತ್ತಾನೆ.

ಮಾಡಿ ಕೆಟ್ಟರು ಮನವಿಲ್ಲದೆ, ನೀಡಿ ಕೆಟ್ಟರು ನಿಜವಿಲ್ಲದೆ
ಮಾಡುವ ನೀಡುವ ನಿಜಗುಣ ಉಳ್ಳಡೆ
ಕೂಡಿ ಕೊಂಬ ಕೂಡಲ ಸಂಗಮದೇವ

ಕರ್ತವ್ಯದಲ್ಲಿ ನಿಷ್ಠೆ, ಶ್ರದ್ಧೆ ಇಲ್ಲದೆ ಮಾಡುವ ಕೆಲಸವು ಪ್ರಯೋಜನಕ್ಕೆ ಬಾರದು. ಅದು ಶಿವ ಮೆಚ್ಚುವ ಕಾಯಕವಾಗದು. ಇಂದು ನಮ್ಮ ನೌಕರ– ಅಧಿಕಾರಿಶಾಹಿ ಜನರು, ವರ್ತಕರು ಮತ್ತು ರಾಜಕಾರಣಿಗಳು ತಮ್ಮ ದುಡಿಮೆಯಲ್ಲಿ 'ಮನ'ವಿಲ್ಲದವರು; ನಡೆಯಲ್ಲಿ 'ನಿಜ'ವಿಲ್ಲದವರು. ಆದ್ದರಿಂದಲೇ ಭ್ರಷ್ಟಾಚಾರ ಇಂದು ನಮ್ಮ ಸುತ್ತಮುತ್ತ ತಾಂಡವಾಡುತ್ತಿದೆ. ಹೌದು, ಇದನ್ನೆಲ್ಲಾ ಮಾಡುತ್ತಿರುವವರು ಯಾರು? ನಾವೇ! ನಮ್ಮವರೇ! ಅದು ಯಾರಿಗೆ? ನಮಗೇ! ನಮ್ಮವರಿಗೇ! ಇದೊಂದು ಬಗೆಯ ಆತ್ಮದ್ರೋಹದ, ದೇಶದ್ರೋಹದ ಕೆಲಸ. ಸಮುದಾಯದ ಕೈತುತ್ತಿನಿಂದ ಬೆಳೆದ ನಾವು ಆ ಸಮುದಾಯವನ್ನೇ ಶೋಷಿಸ ಹೊರಡುವುದು ಎಂಥ ದುರಂತ!? ಇದನ್ನು ನಮ್ಮ ಪಾಲ್ಕೂರಿಕೆ ಸೋಮನಾಥನ ಮಾತುಗಳಿಂದ ವಿಶದೀಕರಿಸಬಹುದು: 'ಧರೆ ಬೀಜಂಗಳ ನುಂಗೆ, ಬೇಲಿ ಹೊಲನೆಲ್ಲಂ ಮೇದೊಡಂ, ಗಂಡ ಹೆಂಡಿರನತ್ಯುಗ್ರದಿ ಶಿಕ್ಷಿಸಲ್, ಪ್ರಜೆಗಳಂ ಭೂಪಾಲಕಂ ಬಾಧಿಸಲ್, ತರುವೇ ಪಣ್ಗಳಂ ಮೆಲ್ಲೆ, ಮಾತೆ ವಿಷಮಂ ಪೆತ್ತರ್ಭಗೂಡಿಸಲ್, ಹರಕೊಲ್ಲಲ್ ಪರಕಾಯ್ವನೇ ಹರಹರ ಶ್ರೀ ಚನ್ನಸೋಮೇಶ್ವರಾ.' ನಮ್ಮ ದೇಶವಾಸಿಗಳನ್ನು ಅವರ ಮಕ್ಕಳೇ ಶೋಷಿಸುತ್ತಿರುವ ಪರಿಯನ್ನು ಇದಕ್ಕಿಂತ ಚೆನ್ನಾಗಿ ಹೇಳಲು ಸಾಧ್ಯವೆ? ಸೋಮನಾಥನ ಮಾತುಗಳು ನಮ್ಮ ಒಳಗಣ್ಣನ್ನು ತೆರಿಸಬೇಕಾಗಿದೆ.

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ವಿಧಾನಸೌಧವನ್ನು ಕಟ್ಟಿಸಿ ಅದರ ಹೆಬ್ಬಾಗಿಲ ಮೇಲು ಭಾಗದಲ್ಲಿ 'ಸರ್ಕಾರದ ಕೆಲಸ ದೇವರ ಕೆಲಸ' ಎಂದು ಬರೆಸಿದರು. ಸರ್ಕಾರದ ಕೆಲಸವನ್ನು ನಿಷ್ಠೆ ಮತ್ತು ಭಯ ಭಕ್ತಿಗಳಿಂದ ಮಾಡಬೇಕೆಂಬುದು, ಅದರಲ್ಲಿ ಲೋಪವಾದರೆ ದೇವರು ಮೆಚ್ಚುವುದಿಲ್ಲವೆಂಬುದೂ ಅದರ ಆಶಯವಾಗಿತ್ತು. ಆದರೆ ನಮ್ಮನ್ನಾಳುವ ಕಾರ್ಯಾಂಗ ಮತ್ತು ಶಾಸಕಾಂಗಗಳು ಅದನ್ನು ಮತ್ತೊಂದು ರೀತಿಯಲ್ಲಿ ಅರ್ಥ ಮಾಡಿಕೊಂಡಂತೆ ತೋರುತ್ತದೆ. 'ದೇವರ ಪೂಜೆಯನ್ನು ಹೇಗೆ ಬೇಕಾದರೂ ಮಾಡಬಹುದು, ಅದ್ದೂರಿ ಆಡಂಬರ ವೈಭವಗಳಿಂದಲೂ ಆಚರಿಸಬಹುದು ಅಥವಾ ಒಂದು ತುಳಸಿದಳದಿಂದಲೂ ಮಾಡಬಹುದು. ಅದರಂತೆಯೇ ಸರ್ಕಾರಿ ಕೆಲಸವು ದೇವರ ಕೆಲಸವಾದ್ದರಿಂದ ಸಮಯಪ್ರಜ್ಞೆ, ಕಾರ್ಯದಕ್ಷತೆಯಿಂದ ಮಾಡಿದರೂ ಆಗುತ್ತದೆ ಅಥವಾ ಕಾಟಾಚಾರದಿಂದ ಅಲ್ಪ ಸ್ವಲ್ಪ ಮಾಡಿದರೂ ಆಗುತ್ತದೆ'– ಎಂದು ಕೆಲಸ ಮಾಡದೆಯೇ ಉದ್ಯೋಗಿಯಾಗಲು ತೊಡಗಿದವು. ಇಂದು ಇಂಥ ವೈಚಿತ್ರ್ಯದಲ್ಲಿ ನಾವು ಬದುಕುತ್ತಿದ್ದೇವೆ. ಹಿರಿಯರ ಕನಸುಗಳನ್ನು ನೆಲಸಮಗೊಳಿಸುತ್ತಾ, ಯಾರೋ ಪುಣ್ಯಾತ್ಮರು ತಂದುಕೊಟ್ಟ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸುಕೊಳ್ಳುತ್ತಿದ್ದೇವೆ.

ಮೇಲಿನ ನನ್ನ ಮಾತುಗಳು ನೈರಾಶ್ಯನೆಲೆಯಿಂದ ಬಂದಂತೆ ತೋರುವುದು ನಿಜ. ಆದರೆ ನಾವು ನಿರಾಶರಾಗಬೇಕಿಲ್ಲ. ಉಚಿತಾನುಚಿತ ವಿವೇಕವನ್ನು ನಾವು ರೂಢಿಸಿಕೊಂಡು, ನಮ್ಮ ಬುದ್ಧಿಗೆ ಬಡಿದಿರುವ ಕಲ್ಮಶವನ್ನು ತೊಡೆದುಕೊಂಡು ನಮ್ಮ ದೇಶಕ್ಕಾಗಿ ದುಡಿಯಬೇಕಾದ ಸಂಕಲ್ಪ ಮಾಡಬೇಕಿದೆ. ಅದಕ್ಕೆ ಬೇಕಾಗಿರುವುದು ನಮ್ಮ ಆತ್ಮದ ಎಚ್ಚರ. ಈ ಎಚ್ಚರವನ್ನು ತಂದು ಕೊಡುವ ಅತ್ಯುತ್ತಮ ಕೀಲಿ ಕೈಗಳನ್ನು ನಮ್ಮ ಹಿರಿಯರಾದ ಗಾಂಧಿ, ವಿವೇಕ, ಬುದ್ಧ, ಬಸವ, ಕುವೆಂಪು ಅವರು ತೋರಿಸಿದ್ದಾರೆ. ಅದನ್ನು ಗುರುತಿಸುವ ಕಣ್ಣು ನಮ್ಮಲ್ಲಿ ಮೂಡಬೇಕಿದೆ.

■ ಶಿಕಾಕು

# ಮಾತೇ ಮುತ್ತು

★ 'ಕಾನೂನು' ಹೆಚ್ಚಿದಂತೆಲ್ಲ 'ನ್ಯಾಯ' ಕಡಿಮೆ ಆಗುತ್ತದೆ!

–ಜರ್ಮನ್ ಗಾದೆ

★ ಕಾಯ್ದೆಗೆ ಸಿಗದವನೆ ಸಂಭಾವಿತ; ಸಿಕ್ಕವ ಮಾತ್ರ ದೋಷಾನ್ವಿತ!

–ಎಂ.ಅಕಬರ ಅಲಿ

★ ಶ್ರೀಮಂತರು ಕಾನೂನುಗಳ ಮೇಲೆ ಅಧಿಕಾರ ಚಲಾಯಿಸುತ್ತಾರೆ; ಕಾನೂನುಗಳಾದರೋ ಬಡವರ ಮೇಲೆ ಅಧಿಕಾರ ಚಲಾಯಿಸುತ್ತವೆ.

–ಆಲಿವರ್ ಗೋಲ್ಡ್‌ಸ್ಮಿತ್

★ ಕಾನೂನು ಜೇಡನ ಬಲೆಯಂತೆ. ದುಂಬಿ ಅದನ್ನು ಹರಿದುಕೊಂಡು ಹೋಗುತ್ತದೆ; ಸೊಳ್ಳೆ ಅದರಲ್ಲಿ ಸಿಕ್ಕಿಕೊಳ್ಳುತ್ತದೆ; ನೊಣವನ್ನು ಹಿಡಿಯುತ್ತದೆ; ಹದ್ದನ್ನು ಬಿಡುತ್ತದೆ!

–ರಷ್ಯಾ ಗಾದೆ

★ ಕಾನೂನಿನ ಸಹಾಯ ಬೇಡಿ ನ್ಯಾಯಾಲಯಕ್ಕೆ ಹೋಗುವುದು, ಬೆಕ್ಕಿಗಾಗಿ ಹಸುವನ್ನು ಕಳೆದುಕೊಂಡಂತೆಯೇ.

–ಚೀನಾ ಗಾದೆ

★ ಕಾನೂನುಗಳನ್ನು ಬರೆದಿಟ್ಟ ಮೇಲೂ ಅವು ಯಾವಾಗಲೂ ಬದಲಾಗದಂತೆ ಇರಬಾರದು.

–ಅರಿಸ್ಟಾಟಲ್

★ ಗುಣವಂತರು ಹಲವು ಬಾರಿ ಕಾನೂನನ್ನು ಮುರಿಯುವುದರಿಂದಲೇ ನಿಜವಾಗಿ ಕಾನೂನನ್ನು ಪಾಲಿಸಿದ್ದಾರೆ.

–ಜಾನ್ ಮಿಲ್ಟನ್

★ ಈಗಿನ ಕಾಲ ಹಿಂದಿನ ಎಲ್ಲ ಕಾಲಗಳಂತೆಯೇ 'ಒಳ್ಳೆಯದು'– ಅದನ್ನು ಹೇಗೆ ಉಪಯೋಗಿಸಬೇಕು ಎನ್ನುವುದು ನಮಗೆ ತಿಳಿದಿದ್ದರೆ.

–ಎಮರ್‌ಸನ್

★ ಲೋಕ ಕಲ್ಯಾಣಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟವರು ನಿಜವಾದ ಶ್ರೇಷ್ಠರು.

–ವೀರೇಂದ್ರ ಹೆಗ್ಗಡೆ

★ ಸಾಣೆಗೆ ಸಿಗದ ವಜ್ರ ವಜ್ರವಲ್ಲ; ಕಷ್ಟಕ್ಕೆ ಸಿಗದ ಮನುಷ್ಯ ಮನುಷ್ಯನಲ್ಲ.

–ಚೀನಿ ಗಾದೆ

★ ಕಾನೂನಿಗಾಗಿ ನಾವಲ್ಲ, ನಮಗಾಗಿ ಕಾನೂನು.

–ಎಸ್.ವಿ.ಪರಮೇಶ್ವರ ಭಟ್ಟ

★ ಕಾಮ– ಪ್ರೇಮ, ಕೆಸರು– ಕಮಲ ಇದ್ದಂತೆ.

–ದ.ರಾ.ಬೇಂದ್ರೆ

★ ಕಾಮ ನಮ್ಮ ಮೇಲೆ ಧಾಳಿಯಿಟ್ಟು ಬರುವಾಗ ತನ್ನ ನಿಜರೂಪದಲ್ಲಿ ಬರುವುದಿಲ್ಲ; ನಾನಾ ರೀತಿಯಲ್ಲಿ ಸೋಗು ಹಾಕಿಕೊಂಡು ಬರುತ್ತದೆ.

–ಎ.ಎನ್.ಮೂರ್ತಿರಾವ್